## ಯಾರು ಭಾಗ್ಯವಂತರು?

ಉದಯ ಮೂವೀಸ್‌ನಲ್ಲಿ ಪ್ರಸಾರವಾದ 'ಭಾಗ್ಯವಂತರು' ಸಿನಿಮಾವನ್ನು ನಮ್ಮ ಕುಟುಂಬ ನೋಡಿ ಆನಂದಿಸಿತು. ವಾಸ್ತವ ಕಥಾ ಹಂದರ ಇರುವುದರಿಂದ ಮನಸನ್ನು ಆಕರ್ಷಿಸಿತು. ಪ್ರಸ್ತುತ ಕೊರೊನಾ ಸುದ್ದಿಯಲ್ಲಿ ರೋಸಿದ ಮನಸಿಗೆ ಭಾಗ್ಯವಂತರು ಮುದ ನೀಡಿತು.

ರಾಜ್ ಕುಮಾರ್ ಮತ್ತು ಬಿ. ಸರೋಜಾ ದೇವಿ ಅವರ ಅಮೋಘ ಅಭಿನಯ ಕಂಡು ಸಂತೋಷವಾಯಿತು. ನಂತರ ನನಗೊಂದು ಅನುಮನ ಕಾಡಿತು. ಇಲ್ಲಿ ಭಾಗ್ಯವಂತರು ಯಾರು? ಚಿತ್ರದಲ್ಲಿ ನಟಿಸಿದವರಾ? ಪ್ರಸಾರ ಮಾಡಿದ ವಾಹಿನಿಯವರಾ? ಪ್ರೇಕ್ಷಕರಾ? ಎರಡೂವರೆ ಗಂಟೆಗಳ ಕಾಲ ಕೊರೊನಾ ನಮ್ಮ ಮನಸಿನಿಂದ ದೂರ ಇಟ್ಟಿತ್ತು.

—ವಿ. ಹೇಮಂತ ಕುಮಾರ್, ಬೆಂಗಳೂರು

## ರೋಗಕ್ಕಿಂತ ಸೌಂದರ್ಯ ಮುಖ್ಯವೇ?

ಕೊರೊನಾ ಯಾರನ್ನೂ ಕಾಡದೆ ಬಿಟ್ಟಿಲ್ಲ. ಈ ರೋಗಕ್ಕೆ ತುತ್ತಾದವರ ಪಟ್ಟಿ ದೊಡ್ಡದೇ ಇದೆ. ಈ ಸಂದರ್ಭದಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ರಿಯಾಲಿಟಿ ಶೋ ನಿರೂಪಕರೂ ನಟರೂ ಸಹ ಈ ಬಾಧೆಯನ್ನು ಅನುಭವಿಸಿದ್ದಾರೆ. ಆದ್ದರಿಂದ ನಿರೂಪಕರು, ಕಾರ್ಯಕ್ರಮದಲ್ಲಿ ಭಾಗವಹಿಸುವ ಸ್ಪರ್ಧಿಗಳು, ವೀಕ್ಷಕರು ಮುಖಕ್ಕೆ ಮಾಸ್ಕ್ ಧರಿಸದೇ ಇರುವುದು ಮುಂಜಾಗ್ರತೆ ಬಗ್ಗೆ ತೋರುವ ಅಸಡ್ಡೆ ಎಂದು ಅನಿಸುತ್ತದೆ. ಸಾರ್ವಜನಿಕ ಸ್ಥಳದಲ್ಲಿ ಸರ್ಕಾರದ ನಿರ್ದೇಶನವನ್ನು ಈ ರೀತಿ ಧಿಕ್ಕರಿಸಿ ರೋಗ ಹರಡಲು ಉತ್ತೇಜನ ನೀಡುವುದು ತಪ್ಪು. ಈ ವಿಚಾರದಲ್ಲಿ ಕಾರ್ಯಕ್ರಮದ ಆಯೋಜಕರು ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವುದು ಕ್ಷೇಮ. ಮಾಸ್ಕ್ ಧರಿಸಿದರೆ ಅವಮಾನವೇ? ಅಥವಾ ಮುಖ ಸೌಂದರ್ಯಕ್ಕೆ ಕುಂದು ತರುತ್ತೆ ಎಂಬ ವೇದನೆಯೇ?

—ರಾಜೀವ್ ಎಸ್.ಮಾಗಲ್, ಸಕಲೇಶಪುರ

ವಾರದ ಪತ್ರ

## ಈ ನಾಟಕೀಯತೆ ಬೇಡ

ಝೀ ಕನ್ನಡದ 'ಮಹಾನಾಯಕ' ಬಹಳ ಚೆನ್ನಾಗಿ ಮೂಡಿಬರುತ್ತಿದೆ. ಇತ್ತೀಚೆಗೆ ಅದರಲ್ಲಿ ಸಿನಿಮೀಯ ರೀತಿಯ ಘಟನೆಗಳನ್ನು ಹೆಣೆಯಲಾಗುತ್ತಿದೆ. ಪುರಂದರನನ್ನು ಮೇಗಳ ಕೇರಿ ಜನ ಥಳಿಸಿ ಕೈಕಾಲು ಕಟ್ಟಿ ಪ್ರಪಾತಕ್ಕೆ ತಳ್ಳುತ್ತಾರೆ. ಎಲ್ಲರೂ ಅವನು ಸತ್ತನೆಂದು ಭಾವಿಸಿ ಸುಮ್ಮನಾಗುತ್ತಾರೆ. ಆದರೆ ಪುರಂದರ ಬಾರ್ಚರಿ ಸ್ವಾಮಿಗಳು ನಡೆಸುವ ಪಂಚಾಯತಿಯಲ್ಲಿ ಭೀಮನಿಗೆ ಶಿಕ್ಷೆ ನೀಡಿವಾಗ ಧುತ್ತೆಂದು ಕಾಣೆಯಾದ ಮಗುವನ್ನು ಎತ್ತಿಕೊಂಡು ಪಂಚಾಯತಿ ಕಟ್ಟೆಯಲ್ಲಿ ಪ್ರತ್ಯಕ್ಷನಾಗುತ್ತಾನೆ. ಭೀಮನಿಗೆ ವಿಧಿಸಿದ್ದ ಶಿಕ್ಷೆಯಿಂದ ಪಾರು ಮಾಡುತ್ತಾನೆ. ಆತ ತಾನು ಬದುಕಿ ಉಳಿದ ಬಗ್ಗೆ ನಂಬಲಾರದ ಕಥೆ ಹೆಣೆಯುತ್ತಾನೆ. ಮಗುವನ್ನು ಸೇತುವೆ ಮೇಲಿಂದ ಸ್ವಾಮಿಗಳ ಶಿಷ್ಯರು ಹರಿಯುವ ನದಿಗೆ ಎಸೆಯುತ್ತಾರೆ. ತಾನು ನೀರಿಗೆ ಬಿದ್ದ ಮಗನನ್ನು ರಕ್ಷಿಸಿದೆ ಎಂದು ಹೇಳುವುದು ಎಷ್ಟರ ಮಟ್ಟಿಗೆ ನಿಜ. ಊರುಗೋಲು ಹಿಡಿದಿರುವ ಪುರಂದರ ಆ ಮಗನನ್ನು ಬದುಕಿಸಿದ್ದು ನಿಜಕ್ಕೂ ವಾಸ್ತವಕ್ಕೆ ದೂರವಾದ ಪ್ರಸಂಗ.

ಮಹಾನಾಯಕರ ಜೀವನ ಚರಿತ್ರೆಯನ್ನು ಕಟ್ಟುಕತೆಗಳಿಂದ ಹೆಣೆದು ಅವರ ಆಶಯಗಳಿಗೆ ಧಕ್ಕೆ ತಂದು ಅವರನ್ನು ಪವಾಡ ಪುರುಷರನ್ನಾಗಿಸುವುದು ಬೇಡ. ಅವರು ಯಾವಾಗಲೂ ವಾಸ್ತವಕ್ಕೆ ಹತ್ತಿರವಾಗಿರುತ್ತಾರೆ. ಮಾಹಾನಾಯಕರ ನೈಜ ಜೀವನವನ್ನು ಆಧರಿಸಿ ಧಾರಾವಾಹಿ ಮುಂದುವರಿಯುವುದು ಒಳಿತು. ಕಲ್ಪನೆಯ ಕೋಟೆಯಲ್ಲಿ ಅವರ ಬದುಕು ಮತ್ತು ಸಾಧನೆಗಳನ್ನು ಚಿತ್ರಿಸದೆ, ಅವರ ನಂಬಿಕೆಯ ಜಾಡಿನಲ್ಲಿಯೇ ಕಥೆ ವಿಸ್ತಾರವಾಗಲಿ. ಆಗ ಮತ್ತಷ್ಟು ಹೃದಯಕ್ಕೆ ಹತ್ತಿರವಾಗುತ್ತದೆ ಎಂಬುದು ನನ್ನ ಕಳಕಳಿ.

—ಪ. ಚಂದ್ರಕುಮಾರ ಗೌನಹಳ್ಳಿ

## ಅಸಹಜ ತಿರುವು ಬೇಡ

ಕಲರ್ ಸೂಪರ್‌ನ 'ಮುದ್ದು ಬಂಗಾರ' ಇಲ್ಲಿವರೆಗೆ ಉತ್ತಮವಾಗಿ ಬರುತ್ತಿತ್ತು. ಆದರೆ ಇತ್ತೀಚಿನ ಕೆಲವು ಕಂತುಗಳು ತೀರ ಅಸಹಜವಾಗಿ ಬರುತ್ತಿವೆ. ವಂಶಿಯು ಕಪಟ ನಾಟಕ ಆಡುತ್ತಾ ತನ್ನ ಹೆಂಡತಿಯ ಪಾವಿತ್ರ್ಯತೆ ಬಗ್ಗೆ ಪರೀಕ್ಷೆಗೆ ಒಡ್ಡುವ ರೀತಿಯನ್ನು ಗಮನಿಸಿದರೆ ತೀರ ಅಸಹ್ಯ ಹಾಗೂ ಅಸಹಜ ಎಂದು ಅನಿಸುತ್ತದೆ. ಪ್ರತಿ ಹಂತದಲ್ಲೂ ವೀರ್ ಅಭಿನಯ ಮೆಚ್ಚುಗೆಯಾಗುತ್ತದೆ. ಕಪಟ ನಾಟಕ ಪಾತ್ರಧಾರಿಗಳ ಪಾತ್ರದಲ್ಲಿ ಅಜ್ಜಿ, ತಾಪಸ್ಯ ಮತ್ತು ವಂಶಿ ಗಮನ ಸೆಳೆದರೂ ಧಾರಾವಾಹಿ ಹಳಿ ತಪ್ಪುತ್ತಿದೆ ಎನಿಸುತ್ತದೆ. ಕಥೆಯ ಹರವು ಸಹಜವಾಗಿ ಸಾಗಲಿ. ಅನಗತ್ಯ ಅಸಹಜ ತಿರುವು ಬೇಡ.

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

## ಕಥೆಯ ಕೊಂಡಿ ಕಳಚಬಾರದು

ಝೀ ಕನ್ನಡದ 'ಸತ್ಯ'ದಲ್ಲಿ ಸತ್ಯಾಳ ಅಕ್ಕ ದಿವ್ಯಾ ಕಾರ್ತಿಕ್ ಆಯೋಜಿಸಿದ್ದ ಸಂತೋಷ ಕೂಟಕ್ಕೆ ಹೋಗಲು ಸತ್ಯಾಳ ಗ್ಯಾರೇಜ್ ಹುಡುಗರ ಬಳಿ ಬಂದು ಹಣ ಕೇಳುತ್ತಾಳೆ. ಆಗ ಅವಳು ಧರಿಸಿದ್ದ ಉಡುಪು ಹಾಗೂ ಕೇಶ ವಿನ್ಯಾಸ ಬೇರೆ ರೀತಿ ಇರುತ್ತದೆ. ಆದರೆ ಅವಳು ಕ್ಯಾಬ್‌ನಲ್ಲಿ ಕುಳಿತುಕೊಳ್ಳುವಾಗ ಅವಳ ಉಡುಪು ಹಾಗೂ ಕೇಶ ವಿನ್ಯಾಸ ಬದಲಾಗಿರುತ್ತದೆ. ಅವಳು ಸಿದ್ಧವಾಗುವವರೆಗೂ ಕ್ಯಾಬ್ ಚಾಲಕ ಕಾಯಲು ಸಾಧ್ಯವೇ? ಹಾಗೆ ದಿವ್ಯಾ ಬಾಲ ಕೊಡಿಸಿದ್ದ ಬೆಲೆ ಬಾಳುವ ಚಿನ್ನದ ಒಡವೆ ಇದ್ದ ಚೀಲವನ್ನು ಎಲ್ಲಿ ಇಟ್ಟರಬಹುದು? ಕ್ಯಾಬಿನಲ್ಲಿ ಕುಳಿತುಕೊಳ್ಳುವಾಗ ಅವಳ ಕೈಯಲ್ಲಿ ಮೊಬೈಲ್ ಬಿಟ್ಟು ಬೇರೇನೂ ಇರುವುದಿಲ್ಲ. ಇಂತಹ ವಿಷಯಗಳನ್ನು ಗಮನಿಸಬೇಕಲ್ಲವೇ? ಕಥೆಯ ಕೊಂಡಿ ಕಳಚಿದರೆ ಕಲ್ಪನಾ ವಿಲಾಸದ ರೈಲು ಹಳಿ ತಪ್ಪುತ್ತದೆ.

—ಕೆ.ಎಸ್. ಸವಿತ, ಬೆಂಗಳೂರು

## ಎಲ್ಲ ಮಾಯವೋ ಪ್ರಭುವೇ!

ಟೀವಿ ಧಾರಾವಾಹಿ ಭರ್ಜರಿಯಾಗಿ ಪ್ರಸಾರ ಆಗುವ ಸಂದರ್ಭದಲ್ಲಿಯೇ ನಟನಟಿಯರು ಅನಾರೋಗ್ಯಕ್ಕೆ ತುತ್ತಾದರೆ ನಿರ್ದೇಶಕರು ಏನು ಮಾಡುತ್ತಾರೆ? ನಾಯಕ, ನಾಯಕಿಯರಾದರೆ ರೆಡಿ ಮಾಡಿದ್ದ ಕಂತುಗಳು ಮುಗಿದ ನಂತರ ಕಥೆ ಬದಲಾಯಿಸಿ ಅವರಿಗೆ ಆ್ಯಕ್ಸಿಡೆಂಟ್ ಮಾಡಿಸಿಯೋ ಇಲ್ಲ ಯಾವುದೋ ಕಾಯಿಲೆಬರಿಸಿಯೋ ಐಸಿಯುನಲ್ಲಿ ಮುಖ ಮುಚ್ಚಿ ಮಲಗಿಸಿಬಿಡುತ್ತಾರೆ. ಇಲ್ಲವಾದರೆ ಅವರನ್ನು ಅಪಹರಣ ಮಾಡಿದಂತೆ ಹೇಳಿಸಿ ಕಥೆಗೆ ಬೊಂಬಾಟ್ ತಿರುವು ನೀಡುತ್ತಾರೆ. ಸಣ್ಣಪುಟ್ಟ ನಟರಾದರೆ ಮುಂದಿನ ಕಂತಿನಲ್ಲಿ ಅವರ ಭಾವಚಿತ್ರಕ್ಕೆ ಅರ್ಧ ಮಾರು ಹೂಹಾರ ಹಾಕಿ ಶ್ರದ್ಧಾಂಜಲಿ ಕೋರುತ್ತಾರೆ. ಕಥೆ ಎಂದಿನಂತೆ ಚ್ಯೂಯಿಂಗಮ್ ಥರ ಸಾಗುತ್ತಿರುತ್ತದೆ.

ಇದಕ್ಕೊಂದು ತಾಜಾ ಉದಾಹರಣೆ. ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ಗಿಣಿರಾಮ' ಧಾರಾವಾಹಿಯ ನಾಯಕಿಗೆ ಕೋವಿಡ್ ಪಾಸಿಟಿವ್ ಆಗಿ ಹೋಂ ಕ್ವಾರಂಟೈನ್ ಆಗಿದ್ದಾರೆ. ಈ ವಾರದ ಕಂತುಗಳಲ್ಲಿ ಅವರು ಅಪಹರಣ ಆಗಿದ್ದಾರೆ.

—ಕೆ. ಶ್ರೀನಿವಾಸ ರಾವ್ ಹರಪನಹಳ್ಳಿ

## ನ್ಯೂಸ್‌ಸೆನ್ಸ್ ಚಾನೆಲ್ಲುಗಳು!

ರಾಜ್ಯದಲ್ಲಿ ಜನತಾ ಕರ್ಫ್ಯೂ ಜಾರಿಯಾದೊಡನೆ ಕ್ಯಾಮೆರಾ ಮತ್ತು ಮೈಕ್ ಹಿಡಿದು ರಾಜಧಾನಿಯ ಮೆಜೆಸ್ಟಿಕ್ ಕಡೆ ದಾಳಿ ನಡೆಸಿದ ಸುದ್ದಿ ವಾಹಿನಿಯ ಯೋಧರು 'ಮೆಜೆಸ್ಟಿಕ್ ಬಳಿ ಜನವೇ ಇಲ್ಲ... ಎಲ್ಲ ಖಾಲಿ ಖಾಲಿ... ಬಿಕೋ ಅನ್ನುತ್ತೆ...' ಎಂದು ಜನರಿಗೆ ವರದಿ ಒಪ್ಪಿಸತೊಡಗಿದರು. ಎರಡನೆಯ ದಿನ ಮಾರುಕಟ್ಟೆಯ ಬಳಿ ತೆರಳಿ 'ಜನಾ ಜನಾ ಜನಾ.... ಈ ಜನರಿಗೆ ಏನಾಗಿದೆ? ಇವರಿಗೆ ಬುದ್ಧಿ ಇಲ್ವಾ?' ಎಂದು ಬಾಯಿ ಬಡಿದುಕೊಂಡರು. ಈ ಸುದ್ದಿವಾಹಿನಿಗಳಿಗೇನಾಗಿದೆ?

—ಪಿ.ಜೆ. ರಾಘವೇಂದ್ರ, ಮೈಸೂರು